# ಪ್ರಶ್ನೆಯೆಂಬ ಕುಡುಗೋಲು

ಈಚೆಗೆ ಗಾಂಧಿವಾದಿ ಡಾ. ಎಚ್. ನರಸಿಂಹಯ್ಯನವರ ಜನ್ಮಶತಮಾನೋತ್ಸವ ನಡೆಯಿತು. ಜಯಂತಿಗಳನ್ನು ಆಚರಿಸುವುದೆಂದರೆ ಒಂದು ಫೋಟೊ ಇಟ್ಟು ಹಾರ ಹಾಕಿ, ನಾಲ್ಕಾರು ಜನ ಸೇರಿ ಭಾಷಣ ಮಾಡುವುದು ಕಾಟಾಚಾರದ ಸಂಗತಿಗಳಾಗಿವೆ. ಮಹನೀಯರಾದ ಬಸವಣ್ಣ, ಕನಕ, ಮಹಾವೀರ, ವಾಲ್ಮೀಕಿ ಅವರ ಜಯಂತಿಗೆ ರಜೆ ನೀಡುವ ಚರ್ಚೆ ತುಂಬ ದಿನದಿಂದಲೂ ನಡೆದಿದೆ. ಆದರೂ ಎಂದಿನಂತೆ ರಜೆಗಳನ್ನು ಮುಂದುವರೆಸಿದೆ. ಬಸವಣ್ಣನಂತಹ ಕಾಯಕದ ಮಹತ್ವ ಸಾವಿರದ ಬಸವಣ್ಣ. ಸಂತಕವಿ ಕನಕ ಇಂತಹವರ ಬದುಕೇ ಒಂದು ಸಂದೇಶ. ಹೀಗಿರುವಾಗ ಆ ದಿನಗಳನ್ನು ರಜೆಯೆಂದು ಸಾರಿ ಜನತೆಯನ್ನು ಆಲಸಿಗಳನ್ನಾಗಿ ಮಾಡುವುದು ಎಷ್ಟು ಸರಿ ಎಂಬ ಪ್ರಶ್ನೆ ಈ ಚರ್ಚೆಗಳ ಹಿಂದಿತ್ತು.

ಈ ಹಿನ್ನೆಲೆಯಲ್ಲಿ ಡಾ. ಎಚ್.ಎನ್. ಅವರ ಜನ್ಮ ಶತಮಾನೋತ್ಸವ ಸರಳವಾಗಿ, ಅರ್ಥಪೂರ್ಣವಾಗಿತ್ತು. ಗೌರಿಬಿದನೂರು ತಾಲ್ಲೂಕಿನ ಹೊಸೂರು ಒಂದು ಹೋಬಳಿ ಕೇಂದ್ರ. 1920 ಜೂನ್ ಆರನೆಯ ತಾರೀಕು, ಭಾನುವಾರದಂದು ಜನಿಸಿದ ಎಚ್.ಎನ್. ತಮ್ಮನ್ನು ಗೇಲಿ ಮಾಡಿಕೊಳ್ಳುವುದು ಭಾನುವಾರ ಹುಟ್ಟಿದ್ದರಿಂದ ನನ್ನ ಜೀವನದಲ್ಲಿ ನನಗೆ ರಜವೇ ಸಿಕ್ಕಲಿಲ್ಲವೆಂದು. ತುಂಬಾ ಹಿಂದುಳಿದ ವರ್ಗದಲ್ಲಿ ಹುಟ್ಟಿದ ಎಚ್.ಎನ್. ಜೀವನದಲ್ಲಿ ಬಡತನ–ಸಿರಿತನಗಳನ್ನು ದಾಟಿ ಬೆಳೆದದ್ದು ದಂತಕತೆ. ತಂದೆ ಕೂಲಿ ಮಠದ ಹಳ್ಳಿ ಮೇಷ್ಟ್ರು, ತಾಯಿ ಬೇರೆಯವರ ಮನೆಯ ಕೆಲಸ, ಕೂಲಿ ಕೆಲಸ ಮಾಡುವಂತಹ ಕಷ್ಟಜೀವಿ. 15X25 ಅಳತೆ ಮಣ್ಣಿನ ಮಾಳಿಗೆಯ, ಮಣ್ಣಿನ ಗೋಡೆಗಳ ಚಿಕ್ಕ ಮನೆ. ಇಂತಹ ಪುಟ್ಟ ಮನೆಯಲ್ಲಿ ವೈಜ್ಞಾನಿಕ ಮನೋಭಾವದ ಈ ಸಾಧಕ ಸೂಲಗಿತ್ತಿಯೊಬ್ಬಳು ತಾಯಿಯ ಹೊಕ್ಕಳ ಬಳ್ಳಿಯನ್ನು ಕುಡುಗೋಲಿನಿಂದ ಕತ್ತರಿಸಿದ ನಂತರ ಈ ಲೋಕಕ್ಕೆ ಕಾಲಿಡುತ್ತಾರೆ.

ತಮ್ಮ ಸಂಪರ್ಕಕ್ಕೆ ಬರುವ ಶಿಷ್ಯರನ್ನೂ ಒಳಗೊಂಡಂತೆ ಸರ್ವರಿಗೂ ಎಚ್.ಎನ್. ಹೇಳುತ್ತಿದ್ದುದು ಯಾವುದನ್ನು ಪ್ರಶ್ನಿಸದೆ ಒಪ್ಪಿಕೊಳ್ಳಬೇಡಿ, ಪ್ರಶ್ನೆಯಿಲ್ಲದ ಯಾವುದನ್ನು ನಂಬಲಾಗದು ಎಂದು. ಬಹಳಷ್ಟು ಜನ ಗುರುತಿಸುವಂತೆ ಕುಡುಗೋಲು ಪ್ರಶ್ನೆಯ ಸಂಕೇತ ಎನ್ನುತ್ತಾರೆ. ಕುಡುಗೋಲಿನಿಂದ ಹೊಕ್ಕಳು ಕತ್ತರಿಸಿ ಈ ಲೋಕಕ್ಕೆ ಬಂದ ಎಚ್.ಎನ್. ಪ್ರಶ್ನೆಯ ಸಂಕೇತ. ಪ್ರಶ್ನಿಸುವ ಸಂಕೇತವಾಗಿಯೇ ಉಳಿದಿದ್ದಾರೆ.

‘ಹೋರಾಟದ ಹಾದಿ’ ಅವರ ಆತ್ಮಕಥೆ. ಅದರ ಕೆಲವು ಭಾಗಗಳು ‘ಸುಧಾ’ದಲ್ಲಿ ‘ಜೀವನ ಚಿತ್ರಮಾಲೆ’ಯಲ್ಲಿ ಪ್ರಕಟವಾಗಿದ್ದು, ತದನಂತರ ಎಚ್.ಎನ್. ಆತ್ಮಕಥೆಯ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಅದಕ್ಕೆ ಪೂರ್ಣರೂಪ ಕೊಡುತ್ತಾರೆ. ದಿನಚರಿಯನ್ನು ಬರೆದಿಡದೆ ಫೋಟೋಗಳನ್ನು ಕೂಡಾ ಸಂಗ್ರಹಿಸದ ಈ ಆತ್ಮಕಥೆ ಯಾವುದೇ ಆತ್ಮ ಪ್ರಶಂಸೆಯಿಂದ ಕೂಡಿಲ್ಲ. ಹೊಸೂರಿನ ಪುಟ್ಟ ಮಣ್ಣಿನ ಮನೆಯ ಈ ವ್ಯಕ್ತಿ ಬೆಳೆದಿದ್ದು ಗುರುಗಳ ಮೆಚ್ಚಿನ ವಿದ್ಯಾರ್ಥಿಯಾಗಿ. ಗುರುಗಳು ದಾರಿ ತೋರಿದ ಹಾಗೆ ಗಾಂಧಿಯನ್ನು ಭೇಟಿ ಮಾಡಿದ್ದು, ಎಂ.ಎಸ್ಸಿ ಮಾಡಿ ಉಪನ್ಯಾಸಕ, ಪ್ರಾಂಶುಪಾಲ, ಉಪಕುಲಪತಿ, ಅಮೆರಿಕದಲ್ಲಿ ಡಾಕ್ಟರೇಟ್ ಮಾಡಿದ್ದು, ಶಾಸಕ, ಪವಾಡ ತನಿಖೆ ಸಮಿತಿಯ ಅಧ್ಯಕ್ಷ ಆಗಿದ್ದು– ಇವೆಲ್ಲವೂ ಅವರು ಬಯಸದೆ ಬಂದದ್ದು ಮತ್ತು ಪಡೆದದ್ದು.

ಜೀವನವೆಲ್ಲಾ ಮೌಲ್ಯಕ್ಕಾಗಿ, ಸತ್ಯದ ಉಳಿವಿಗಾಗಿ, ವೈಜ್ಞಾನಿಕ ಮನೋಭಾವಕ್ಕಾಗಿ, ಜನರ ಮೌಢ್ಯತೆಯ ವಿರುದ್ಧ ಹೋರಾಟ ಮಾಡಿದ ಎಚ್.ಎನ್. ಬದುಕು ಹೋರಾಟದ ಹಾದಿಯಲ್ಲಿಯೇ ಸಾಗುತ್ತದೆ. ಪವಾಡ ತನಿಖಾ ಸಮಿತಿಯ ಅಧ್ಯಕ್ಷನಾಗಿ ಅವರು ಕಂಡುಹಿಡಿದ ಕೆಲವು ಪ್ರಕರಣಗಳು ಇಂದಿಗೂ ಉಲ್ಲೇಖನಾರ್ಹ. ಬಾನಾಮತಿ, ಕೂಗುಮಾರಿಗಳ ದಾಂದಲೆ ಮಿತಿ ಮೀರಿದಾಗ ಎಚ್.ಎನ್. ಸಮಿತಿಯ ಸಮೇತ ಹಾಜರಾಗುತ್ತಾರೆ. ಇವರು ಕಾಲಿಟ್ಟ ನಂತರ, ಎಲ್ಲಾ ಉಪದ್ರವಗಳು ಹೇಳಹೆಸರಿಲ್ಲದಂತೆ ಮಾಯವಾಗುತ್ತವೆ.

ಶ್ರೀಮಂತರ ಕೋಟೆಯಲ್ಲಿದ್ದ ಬೂದಿ ಬಾಬಾನ ಪವಾಡಗಳ ಸತ್ಯವನ್ನು ಬಯಲಿಗೆಳೆಯುತ್ತಾರೆ. ಬಾಬಾರನ್ನು ಪವಾಡ ಸಮಿತಿಯ ಮೂಲಕ ಮುಖಾಮುಖಿಯಾಗಲು ಪ್ರಯತ್ನಿಸುತ್ತಾರೆ. ವೈಚಾರಿಕ ಮನೋಭಾವ ಬೆಳೆಸಲು ಅವಿರತ ಹೋರಾಟ ಅವರದು. ಪ್ರತಿ ಬಾರಿಯೂ ಮಳೆ ಕೈಕೊಟ್ಟಾಗ ಜನಜೀವನ, ವ್ಯವಸಾಯ, ರೈತರೆಲ್ಲರೂ ಕಂಗೆಟ್ಟು ಹೋಗುತ್ತಾರೆ. ಪುರಾತನ ಕಾಲದ ಗ್ರಾಮಜೀವನದಲ್ಲಿ ಮಳೆಗಾಗಿಯೇ ದೈವದ ಮೊರೆ ಹೋಗುವ ಹಲವು ಆಚರಣೆಗಳಿದ್ದವು. ಇತ್ತೀಚೆಗೆ ಸರ್ಕಾರ ಮಳೆ ಮೋಡ ಬಿತ್ತುವ ಬಗ್ಗೆ ಆಲೋಚಿಸಿದೆ. ಇದರ ಜೊತೆಗೆ ಧಾರ್ಮಿಕ ದಾನ ದತ್ತಿ ಇಲಾಖೆ ಧಾರ್ಮಿಕ ಸಂಸ್ಥೆಗಳಿಗೆ 10,000 ರೂಪಾಯಿಗಳನ್ನು ಮೀರದಂತೆ ಹವನ, ಹೋಮಕ್ಕೆ ವ್ಯಯಿಸಲು ಹಣ ಬಿಡುಗಡೆ ಮಾಡಿದೆ. 1985, ಮೇ 30ನೆಯ ತಾರೀಕು ಮಳೆಗಾಗಿ. ಮಳೆ ತರಿಸಲೆಂದು ಸರ್ಕಾರ ಮತ್ತು ಜಲಮಂಡಲಿ ಶಿವಬಾಲಯೋಗಿಗಳನ್ನು ಆಹ್ವಾನಿಸಿತ್ತು. ಇದು ಅವೈಜ್ಞಾನಿಕವೆಂದು, ಸಂವಿಧಾನಕ್ಕೆ ವಿರೋಧವೆಂದು ಪ್ರತಿಭಟಿಸಿ ಈ ಖಾತೆಗೆ ಸಂಬಂಧಿಸಿದ ಮಂತ್ರಿ ಎ. ಲಕ್ಷ್ಮೀಸಾಗರ್ ಅವರೊಂದಿಗೆ ಎಚ್.ಎನ್. ಬಿರುಸಿನ ವಾದ ನಡೆಸುತ್ತಾರೆ. ಸರ್ಕಾರ ತನ್ನ ಪ್ರಯತ್ನ ಬಿಡುವುದಿಲ್ಲ. ಭಕ್ತರ–ಶಿಷ್ಯರ ಹಾರಾಟ, ಚೀರಾಟ, ಭಜನೆ, ಧ್ಯಾನ, ಹೋಮ ಯಾವುದು ಫಲಿಸದೆ ಮಳೆ ಬರಲಿಲ್ಲ. ಈಗ ಇಂತಹದೇ ದೈವದ ಕೃಪೆಗಾಗಿ ಸರ್ಕಾರ ಕಾಯುತ್ತಿದೆ. ಪ್ರಶ್ನೆಗಳನ್ನೇ ಕುಡುಗೋಲನ್ನಾಗಿಸಿಕೊಂಡ ಎಚ್.ಎನ್. ರವರಂತಹ ನಿಸ್ವಾರ್ಥ, ಸಮಾಜಪರ, ಪ್ರಗತಿಪರ ವ್ಯಕ್ತಿತ್ವ ಈಗ ಮತ್ತೆ ಮತ್ತೆ ನೆನಪಾಗುತ್ತಿದೆ.

■ **ಅಮೃತಮತಿ**

## ಮಾತೇ ಮುತ್ತು

- ಶಿಕ್ಷಣ ಮಾನವನನ್ನು ನೈತಿಕವಾಗಿ ಬೆಳೆಸುವ ಕಲೆಯಾಗಿರಬೇಕು.

  —ಹೆಗಲ್

- ಗಟ್ಟಿ ಯಾವುದು, ಜಳ್ಳು ಯಾವುದು ಎಂಬುದನ್ನು ತಿಳಿದು ಶಾಶ್ವತವಾದ ಸತ್ಯವನ್ನು ಹುಡುಕುವುದು ನಮ್ಮ ಧರ್ಮವಾಗಬೇಕು.

  —ಬಿಎಂಶ್ರೀ

- ಜೀವನದಲ್ಲಿ ಬುದ್ಧಿವಂತಿಕೆಯೊಂದೇ ಸಾಲದು ತಾಳ್ಮೆ ಮತ್ತು ವಿವೇಚನೆ ಕೂಡ ಮುಖ್ಯ. ಅಂತಹವರ ಬದುಕು ನಿಜಕ್ಕೂ ಸಾರ್ಥಕ.

  —ವಿನೋಬಾ ಭಾವೆ

- ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.

  —ಸ್ವಾಮಿ ವಿವೇಕಾನಂದ

- ದಯೆಯೇ ತೃಪ್ತಿಯನ್ನು ತರುವ ಸತ್ಯ.

  —ಖಲೀಲ್ ಗಿಬ್ರಾನ್

- ಬೇರೊಬ್ಬರ ಗುಲಾಮನಾದ ಕೂಡಲೇ ಮನುಷ್ಯನ ಅರ್ಧದಷ್ಟು ಗುಣಗಳು ದೂರವಾಗುತ್ತವೆ.

  — ಜವಾಹರಲಾಲ್ ನೆಹರು

- ಪ್ರಪಂಚದಲ್ಲಿ ನಾಲಿಗೆಯ ಸವಿಗಿಂತ ಅನಿಷ್ಟವಾದದ್ದು ಬೇರೆ ಯಾವುದೂ ಇಲ್ಲ.

  —ಗೌತಮ ಬುದ್ಧ

- ಪ್ರಚಾರದಿಂದ ತಪ್ಪು ಎಂದೂ ಸತ್ಯವಾಗಲಾರದು, ಸತ್ಯವನ್ನು ಯಾರೂ ನೋಡಲಿಲ್ಲ ಎಂಬ ಕಾರಣಕ್ಕಾಗಿ ಅದು ತಪ್ಪಾಗಲಾರದು.

  —ಮಹಾತ್ಮ ಗಾಂಧಿ

- ಧರ್ಮವೆಂದರೆ ಕೇವಲ ನಂಬಿಕೆಯಲ್ಲ, ಒಳ್ಳೆಯ ನಡವಳಿಕೆ.

  —ರಾಧಾಕೃಷ್ಣನ್